ಇದ್ದರೆ, ಚಿಪ್ಪಣ್ಣನನ್ನು ಬಾದಾಮಿ ಅಥವಾ ಅವನ ಕಡೆಯವರು ಕೊಂದೇ ಬಿಡಬಹುದಲ್ವೇ?"

"ಆದ್ರೆ ಚಿಪ್ಪಣ್ಣನನ್ನು ನೀನೇ ಕೊಂದಿಯಲ್ಲ!"

"ಅದು ಆಕಸ್ಮಿಕ. ಸಂಜೆ ಆರರ ಹೊತ್ತಿಗೆ ಬಾದಾಮಿ ಬರುವುದೆಂದು ಗೊತ್ತು ಮಾಡಲಾಗಿತ್ತು. ನಾನು ಐದು ಗಂಟೆಯಿಂದಲೇ ಚಿಪ್ಪಣ್ಣನ ಮನೆಯ ಬಳಿ ಅಡಗಿ, ಕಾಯುತ್ತಿದ್ದೆ. ಆರು ಗಂಟೆಗೆ ಬಾದಾಮಿ ಬಂದ. ಆದರೆ, ಯೋಜನೆಗೆ ವಿರುದ್ಧವಾಗಿ ಆತ ಚಿಪ್ಪಣ್ಣನ ಮನೆಯೊಳಕ್ಕೆ ಹೋದ. ಅದೇಕೆ ಎನ್ನುವುದು ನನ್ಗೆ ಅರ್ಥವಾಗಲಿಲ್ಲ. ತುಸು ಹೊತ್ತಿನಲ್ಲಿ ಹೊರಬಂದ ಆತ, ಶೂವನ್ನೊಮ್ಮೆ ಪರೀಕ್ಷಿಸಿ, ಚಿಪ್ ಇರುವುದನ್ನು ಖಚಿತಪಡಿಸಿಕೊಂಡು, ನಂತರ ಅದನ್ನು ಧರಿಸಿ ದೇವಸ್ಥಾನದತ್ತ ಹೋಗಿದ್ದನ್ನು ಕಂಡೆ. ಕೆಲಸ ಸುಲಭವಾಗಿ ಮುಗಿದುದಕ್ಕೆ ದೇವರಿಗೆ ಕೈಮುಗಿಯಲು ಹೋಗಿರಬೇಕು! ತಕ್ಷಣ, ನಾನು ಚಿಪ್ಪಣ್ಣನ ಮನೆಯೊಳಗೆ ನುಗ್ಗಿದೆ. ನನ್ನನ್ನು ಆತ ನಿರೀಕ್ಷಿಸಿರಲಿಲ್ಲ. ಜಿಪಿಎಸ್ ಟ್ರ್ಯಾಕರ್ ಕೊಡುವಂತೆ ಆತನಲ್ಲಿ ಕೇಳಿದೆ. ಆತ ನಿರಾಕರಿಸಿದ. ಬಲವಾಗಿ ಆತನ ಕೆನ್ನೆಗೆ ಹೊಡೆದೆ. ಆತ ದೊಪ್ಪನೆ ಬಿದ್ದ. ಮೇಜಿನ ಅಂಚು ಆತನಿಗೆ ತಾಗಿರಬೇಕು ಅಂತ ಅನ್ನಿಸಿತು. ಚಿಪ್ಪಣ್ಣ ಸತ್ತ ಎಂದು ಮತ್ತೆ ಗೊತ್ತಾಯಿತು. ಮೇಜಿನ ಮೇಲಿದ್ದ ಟ್ರ್ಯಾಕರ್ ಎತ್ತಿಕೊಂಡು ಓಡಿದೆ. ಬಾದಾಮಿಗಾಗಿ ದೇವಸ್ಥಾನದ ಹೊರಗೆನೇ ಕಾದು ಕುಳಿತೆ. ಕೊಂಚ ಸಮಯದಲ್ಲಿ ಟ್ರ್ಯಾಕರ್ ಸದ್ದು ಮಾಡಿತು. ಅದು ದೇವಸ್ಥಾನದ ಸನಿಹ ನಿಲ್ಲಿಸಿದ್ದ ಕಾರಿನೊಳಗಿನಿಂದ ಬರುತ್ತಿತ್ತು. ಬಾದಾಮಿ ಕಾರು ಏರಿದ್ದು ಖಚಿತವಾಯಿತು. ಅದನ್ನು ನಾನು ನಿರೀಕ್ಷಿಸಿರಲಿಲ್ಲ. ನನ್ನ ದ್ವಿಚಕ್ರ ವಾಹನ ದೂರದಲ್ಲಿತ್ತು. ಕೆಲ ಕ್ಷಣಗಳಲ್ಲೇ ಕಾರು ತಿರುಗಿ ಹೊರಟು ಹೋಯಿತು. ವಾಹನದ ರಿಜಿಸ್ಟ್ರೇಶನ್ ನಂಬರು ಗುರುತಿಸಿಟ್ಟುಕೊಂಡೆ. ಕೆಲ ಕ್ಷಣಗಳಲ್ಲೇ ವಿಚಿತ್ರವೊಂದು ಸಂಭವಿಸಿತು. ರಸ್ತೆಯ ಆ ಕಡೆಯಿಂದ ಬಾದಾಮಿ ನಡೆದು ಬರುತ್ತಿರುವುದು ಕಾಣಿಸಿತು. ಆಗ ಟ್ರ್ಯಾಕರ್ ಸದ್ದು ಹೊರಡಿಸಲಿಲ್ಲ! ಅಂದರೆ, ಶೂ ಅದಲುಬದಲಾಗಿದೆ ಅಂತ ತಕ್ಷಣ ಹೊಳೆಯಿತು! ಬಹುಶಃ ಶೂ ಬದಲಾಗಿದ್ದು ಆತನಿಗೆ ಗೊತ್ತಾಗಿ ವಾಪಸು ಬಂದಿರಬೇಕು. ಆತ ಹೊರಹೋಗಿದ್ದನ್ನು ನಾನು ಕಂಡೇ ಇರಲಿಲ್ಲ. ನಂತ್ರ, ಪತ್ರಿಕೆಯಲ್ಲಿ ಶೂ ಕಳವಿನ ಸುದ್ದಿ ಬಂದಾಗ, ಬಾದಾಮಿ ಶೂನ ಹಿಂದೆ ಬಿದ್ದಿದ್ದು ಗೊತ್ತಾಯ್ತು."

"ಜಿಪಿಎಸ್ ಟ್ರ್ಯಾಕರ್ ಎಷ್ಟು ದೂರದವರೆಗೆ ಜಿಪಿಎಸ್ ಗ್ರಹಣ ಮಾಡಬಲ್ಲುದು?" ನನ್ನ ಅನುಮಾನ.

"ಸುಮಾರು ಒಂದು ಕಿಲೋಮೀಟರ್. ಅದೊಂದು ಬ್ಲೂಟೂಥ್ ಟ್ರ್ಯಾಕರಿನ ತುಸು ಸುಧಾರಿತ ಆವೃತ್ತಿ. ಪೂರ್ಣ ಪ್ರಮಾಣದ ಜಿಪಿಎಸ್ ಅಲ್ಲ. ಆ ಕಾರಿನ ಮಾಲೀಕನನ್ನು ಪತ್ತೆ ಮಾಡಲು ನನಗೆ ಮೂರ್ನಾಲ್ಕು ದಿನಗಳು ಬೇಕಾದವು. ವಿವರ ಇವತ್ತು ಬೆಳಗ್ಗೆ ಸಿಕ್ಕಿತ್ತು. ಮಧ್ಯಾಹ್ನ ಇಲ್ಲಿಗೆ ಬಂದಾಗ, ಟ್ರ್ಯಾಕರಿನಲ್ಲಿ ಸಿಗ್ನಲ್ ಸಿಕ್ತು. ಶೂ ಅಪಹರಿಸಲು ಯತ್ನಿಸಿದೆ. ಬಾದಾಮಿಯೂ ಶೂನ ಹಿಂದೆ ಇದ್ದಾನಲ್ವೇ. ತಡ ಮಾಡಿದ್ರೆ ತೊಂದ್ರೆ ಅಂತ ರಾತ್ರಿನೇ ಬಂದೆ."

"ನಾನೂ ಹಾಗೇ ಊಹಿಸಿದ್ದೆ. ದಶಗಣಪತಿ, ನೀವು ಹೊಸದಾಗಿ ಶೂ ಖರೀದಿಸಿ, ದೇವಸ್ಥಾನಕ್ಕೆ ಹೋದಾಗ ಮಾತ್ರ ಧರಿಸಿದ್ದೀರಿ ಅಂದ್ರಿ. ನೀವು ಕಾರಿನಲ್ಲಿ ಹೋಗಿದ್ದು. ಆದರೆ ಶೂಗೆ ಹೊಸ ಡಾಮರು ಅಂಟಿಕೊಂಡಿತ್ತು. ಇದು ಹೇಗೆ ಸಾಧ್ಯ? ನಾನು ಮುನ್ಸಿಪಾಲಿಟಿ ಕಚೇರಿಯಲ್ಲಿ ವಿಚಾರಿಸಿದಾಗ, ಅಯ್ಯಪ್ಪ ಸ್ವಾಮಿ ಗುಡಿ ರಸ್ತೆಗೆ ಹುತ್ತರಿ ಹಬ್ಬದ ವೇಳೆಗಷ್ಟೇ ಡಾಮರು ಹಾಕಲಾಗಿದೆ. ಬೇರೆಲ್ಲೂ ಸದ್ಯದಲ್ಲಿ ಡಾಮರು ಹಾಕಿಲ್ಲ ಅನ್ನುವುದು ಗೊತ್ತಾಯ್ತು. ಹಾಗಿದ್ದರೆ ಅಲ್ಲೇ ಶೂ ಬದಲಾಗಿರಬೇಕು ಅಂತ ತರ್ಕಿಸಿದೆ. ಚಿಪ್ಪಣ್ಣನ ಮನೆಯೂ ದೇವಸ್ಥಾನದ ಹತ್ತಿರ ಇರುವುದನ್ನು ಗಮನಿಸಿದೆ. ಆತನ ಕೊಲೆಯಾಗಿದ್ದೂ ಹುತ್ತರಿ ಹಬ್ಬದ ದಿನವೇ. ಅಂಗಡಿಯಾತ ನೀಡಿದ ಗ್ರಾಹಕರ ಪಟ್ಟಿಲಿ ಆತನ ಹೆಸರೂ ಇತ್ತು. ಆತ ರಾ ಕಚೇರಿಯ ಉದ್ಯೋಗಿಯಾಗಿರೋದು, ಆತನ ಮನೆಯಲ್ಲಿ ಸಿಕ್ಕ ಹತ್ತು